# ಟಿಪ್ಪು: ಐತಿಹಾಸಿಕ ಪರಿಕಲ್ಪನೆಯ ನೆಲೆಯಲ್ಲಿ ಒಂದು ಅವಲೋಕನ

**ಡಿ. ಪುರುಷೋತ್ತಮ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬೈರಾಪುರ.

Article Link: https://aksharasurya.com/2024/04/d-purushotham.php
DOI: https://doi.org/10.5281/zenodo.10929686

## ABSTRACT:

ಭಾರತವು ರಾಜ ಮಹಾ ರಾಜರಿಂದ ಅನುಭವಿಸಿದ ಪ್ರಭುತ್ವದ ಕಲ್ಪನೆ, ಬ್ರಿಟೀಷರಿಂದ ಕಲಿತ ಪ್ರಭುತ್ವದ ಪಾಠ, ಸ್ವಾತಂತ್ರ್ಯ ನಂತರ ನಾವು ಅನುಭವಿಸುತ್ತಿರುವ ಪ್ರಜಾಪ್ರಭುತ್ವದ ಕಲ್ಪನೆಗಳಲ್ಲಿ ಬಹಳ ವೈರುಧ್ಯ ಮತ್ತು ವ್ಯತ್ಯಾಸಗಳು ಇವೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಇತಿಹಾಸವನ್ನು ನೋಡಿದರೆ ಬ್ರಿಟೀಷರು, ಇಲ್ಲಿಯ ರಾಜ ಮಹಾರಾಜರುಗಳೆಲ್ಲರೂ ಪ್ರಜಾಪ್ರಭುತ್ವದ ವಿರೋಧಿಗಳೆಂದೇ ಬರೆಯಬೇಕಾಗುತ್ತದೆ. ಏಕೆಂದರೆ ಅವರುಗಳು ಯಾರು ಇಂದಿನ ಸಂವಿಧಾನ ದತ್ತವಾದ ಪ್ರಭುತ್ವನ್ನು ನಡೆಸಿಲ್ಲ. ಪ್ರಜಾಪ್ರಭುತ್ವ ಕಲ್ಪನೆಯಿಂದ ಇತಿಹಾಸ ನೋಡುವುದು ಕೂಡ ತಪ್ಪು. ಏಕೆಂದರೆ ಆ ಕಾಲದ ಚರಿತೆಯಲ್ಲಿ ಇಲ್ಲದನ್ನು ಕಾಣ ಬಯಸಿದರೆ ಅದು ಸಿಗುವುದಿಲ್ಲ. ಇದರಿಂದ ನಮ್ಮ ಪ್ರಭುತ್ವ ಒಪ್ಪುವ ಚರಿತ್ರೆ ನಮಗೆ ಲಬ್ಧವಾಗುವುದಿಲ್ಲ. ಕಾಲ ಪ್ರಜ್ಞೆ ಇರದೆ, ಚಾರಿತ್ರರಿಕ ದೃಷ್ಟಿ ಇರದೆ ಬರೆದ ಟಿಪ್ಪು ಕುರಿತಾದ ಅನೇಕ ಕೃತಿಗಳು ರೋಚಕತೆಯ ಧಾರ್ಮಿಕ ಒಡಕನ್ನು ಉಂಟುಮಾಡುವ ಪ್ರಚೋದನಾತ್ಮಕವಾದ ಕೃತಿಯಾಗಿದೆ. ಹಿಂದೂ ದೇವಾಲಯವನ್ನು ಲೂಟಿ ಮಾಡಿದ ಮರಾಠ ಬ್ರಾಹ್ಮಣ ಪೇಶ್ವೆಗಳ ಬಗ್ಗೆ ಮತೀಯ ಬರಹಗಾರರು ಜಾಣ ಮೌನವಹಿಸುವುದು ಏಕೆ? ಕಾನೂನಿನ ಅಥವಾ ವೈದ್ಯಶಾಸ್ತ್ರದ ಅರಿವೇ ಇರದ ನಾನು ಕಾನೂನಿನ ಅಥವಾ ವೈದ್ಯಶಾಸ್ತ್ರ ಕುರಿತು ಬರೆದರೆ ಏನು ಅಪಾಯವಾಗುವುದು? ಅದೇ ಅಪಾಯ ಚರಿತ್ರೆಯಲ್ಲೂ ಆಗುವುದು. ಆ ಎಲ್ಲ ಧರ್ಮದ ರಾಜರುಗಳಂತೆ ಟಿಪ್ಪು ಕೂಡ ಒಬ್ಬ ರಾಜ. ಟಿಪ್ಪು ಕುರಿತಾದ ಬರಹಗಳ ಓದಿಗಿಂತ ಭಿನ್ನವಾದ ನೈಜ್ಯ ಚರಿತ್ರೆಯ ಹೊಸ ಓದನ್ನು, ಸಂಶೋಧನೆಯನ್ನು ಬಯಸುವ ಆಕರ್ಷಕ ವ್ಯಕ್ತಿ, ವಸ್ತು ವಿಷಯವಾಗಿದೆ.

## KEYWORDS:

ಹೈದರಾಲಿ, ಟಿಪ್ಪು, ಇಸ್ಟ್‌ಇಂಡಿಯ ಕಂಪನಿ, ರಹಮತ್ ತರೀಕೆರೆ, ಲಾರ್ಡ್ ಕಾರ್ನ್ವಾಲಿಸ್.

ವರ್ತಮಾನ ಎಂಬುದು ಕೇವಲ ನಮ್ಮಗಳ ಬದುಕಿಗೆ ಸೀಮಿತವಾದ ಕಾಲಾನುಭವವಲ್ಲ. ಅದು ಭೂತಕಾಲದೊಂದಿಗೆ ಅನುಸಂಧಾನಗೊಂಡು ನಿರೂಪಿತವಾದ ಭವಿಷ್ಯದ ಅನುಭೋಗದ ರೂಪವೇ ಇಂದಿನ ವರ್ತಮಾನ. ಕಾಲದ ವ್ಯಾಖ್ಯಾನದಿಂದೊದಿಗೆ ಕಾಲವನ್ನು ಅಳೆಯುವ ಪ್ರಯತ್ನವಲ್ಲ; ಕಾಲವನ್ನು ಸರಿಯಾಗಿ ಅರಿಯುವ ಪ್ರಯತ್ನ ಅಷ್ಟೇ. ಕಾಲದ ಜೊತೆಗೆ ಮುಖಾಮುಖಿಯಾದಗ ಕೆಲ ಗೊಂದಲಗಳು ಏರ್ಪಡುವುದು ಸಾಮಾನ್ಯ. ಅದೇ ರೀತಿ ಕೆಲ ಭೂತಕಾಲದ ಘಟನೆಗಳ ಜೊತೆಗೆ ಮುಖಾಮುಖಿಯಾದಗ ಘಟನೆಗಳು ಭಿನ್ನವಾಗಿ ಕಾಣಲು ವರ್ತಮಾನದ ಅರಿವಿನ ತೊಡಕು ಪ್ರಮುಖ ಕಾರಣವಾಗಿವೆ. ಭೂತಕಾಲದ ಚಾರಿತ್ರಿಕ ಘಟನೆಗಳನ್ನು ಸರಳಿಕರಣಗೊಳಿಸದೆ, ಅದನ್ನು ವ್ಯಾಖ್ಯಾನಿಸದೆ, ಅದನ್ನು ಪುನಃ ನಿರೂಪಿಸದೆ, ಘಟನೆಗಳ ಆಧಾರವನ್ನು ಅರಿಯುತ್ತ, ವಿಷಯದ ಮಿತಿ ಮತ್ತು ವಿಸ್ತಾರತೆಯನ್ನು ಕಾಲದ ಅನುಕ್ರಮದಲ್ಲಿ ಗ್ರಹಿಸುತ್ತ ಚರಿತ್ರೆಯನ್ನು ತಿಳಿಯಬೇಕೆ ಹೊರತು, ಆ ಕಾಲದ ಘಟನೆಗಳ ವಿಷಯದ ಪರ ವಿರೋಧಗಳ ಚರ್ಚೆಗಳಿಂದ ವರ್ತಮಾನಕ್ಕೆ ಯಾವುದೇ ಆಯಾಮದಿಂದಲೂ ಲಾಭವಿಲ್ಲ. ಇದರಿಂದ ಹಾನಿಯೇ ಹೆಚ್ಚು. ವರ್ತಮಾನಕ್ಕೆ ಬೇಕಾಗಿರುವುದು ಪರ ವೀರೋಧದ ಚರ್ಚೆಗಳಲ್ಲ, ಭೂತಕಾಲದ ಅನುಭವಗಳು ಜ್ಞಾನ, ವಿಜ್ಞಾನ, ವಿಚಾರಗಳ ಸತ್ಯಾನ್ವೇಷಣೆಯ ಕ್ರಮದಲ್ಲಿ ಬರಬೇಕೆ ಹೊರತು ವರ್ತಮಾನದಲ್ಲಿರುವ ಅಧಿಕಾರದ ಹುಕುಂನಿಂದಲ್ಲ.

ಟಿಪ್ಪು ಎಂಬ ಹೆಸರು, ಆತನ ವಿಷಯ, ಬದುಕು, ಸಾಧನೆ, ಕೊಡುಗೆ, ನಷ್ಟ, ಹೀಗೆ ಕೇವಲ ವ್ಯಕ್ತಿ ಅಧ್ಯಯನವಾಗದೆ ಅದು ನೈಜ್ಯವಾದ ಚಾರಿತ್ರಿಕವಾದ ಅಧ್ಯಯನವಾಗಬೇಕು. ವರ್ತಮಾನದ ಸೈದ್ಧಾಂತಿಕ ವರ್ಣ ರಂಜಕ ದೃಷ್ಟಿಯಿಂದ ಭೂತದವನ್ನು ನೋಡುವುದು ಕೂಡ ಇಂದಿನ ಸಂಶೋಧಕರ ಸಂಶೋಧನೆಯ ಬಹುದೊಡ್ಡ ವೈಫಲ್ಯವಾಗಿದೆ. ಭಾರತದ ಚರಿತ್ರೆಯಲ್ಲಿ ಪ್ರಭುತ್ವ ಮತ್ತು ಧರ್ಮ ಎರಡು ಜೊತೆ ಜೊತೆಯಾಗಿ ಸಾಗಿ ಬಂದಿರುವ ಜೋಡಿ ಎತ್ತುಗಳು. ಬಹುಶಃ ಪಶ್ಚಿಮಾದ ಚಾರಿತ್ರಿಕ ಪ್ರಜ್ಞೆಯಲ್ಲಿ ಕಾಣದ ಗೊಂದಲಗಳು, ನಮ್ಮ ಚಾರಿತ್ರಿಕ ಪ್ರಜ್ಞೆಯಲ್ಲಿದೆ. ಪ್ರಜ್ಞೆ ಎಂಬುದು ವ್ಯಕ್ತಿಯ ನೆಲೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿಲ್ಲ. ಅದು ಸಮುದಾಯಕಿವಾಗಿ, ಸಮಗ್ರವಾದ ಸಮಷ್ಟೀ ನೆಲೆಯಲ್ಲಿ ಪ್ರಸ್ತಾಪ ಮಾಡಿರುವುದು. ಅದು ಏಕರೂಪಿಯಲ್ಲ; ಬಹುತ್ವದ ಧ್ವನಿಯಾಗಿದೆ.

ಶೈವ, ವೈಷ್ಣವ, ಜೈನ, ಬೌದ್ಧ, ಧರ್ಮದ ರಾಜರುಗಳು ಈ ದೇಶದ ಪ್ರಭುತ್ವದ ಪಾಲುದಾರರಾಗಿ ಭಿನ್ನ ಕಾಲದಲ್ಲಿ ಆಳ್ವಿಕೆ ಮಾಡಿದರು ಎಂದು ಹೇಳವ ಚಾರಿತ್ರಿಕ ಬರಹಗಳು, ಮುಸ್ಲಿಂ, ಇತರೆ ಧರ್ಮದ ರಾಜರುಗಳು ಈ ನೆಲವನ್ನು ಲೂಟಿ ಮಾಡಿದರು, ಸಾವಿರಾರೂ ಜನರನ್ನು ಹಿಂಸೆ ಮಾಡಿದರು, ಅವರುಗಳನ್ನು ಕೌರ್ಯ

ರೂಪದ ಪಾತ್ರಧಾರಿಗಳಾಗಿ ದಾಖಲಿಸುವರು, ಈ ರೀತಿ ದಾಖಲಿಸುವುದರ ಬಗೆ ಬಗೆಯ ಪರಿ ನೋಡಿದರೆ ಇಲ್ಲಿಯ ಸಮಷ್ಟಿ ಪ್ರಜ್ಞೆ ಚಾರಿತ್ರಿಕವಾದ ವಿಚಾರವನ್ನು ಪರಿಗ್ರಹಿಸುವ ನೆಲೆಯಲ್ಲೇ ಒಂದು ಸಮಸ್ಯೆ ಇರುವುದು ಎದ್ದು ಕಾಣುತ್ತದೆ. ಮೇಲಿನ ಕೆಲ ಧರ್ಮಗಳ ವಿಚಾರವನ್ನು ಗಮನಿಸುವ.

ಇಂದು ಶೈವ ಮತ್ತು ವೈಷ್ಣವ ಧರ್ಮಗಳು ಒಂದೇ ಎನ್ನುವಷ್ಟು ಬೆರೆತು ಹೋಗಿದೆ. ಜೈನ ಧರ್ಮ ಶ್ರೀಮಂತರ ಪಾಲಿನ, ಬಂಡವಾಳ ಶಾಹಿಗಳ ಬಹುತೇಕ ವ್ಯಾಪಾರಿ ವರ್ಗದ ಧರ್ಮವಾಗಿದೆ. ಬೌದ್ಧ ಧರ್ಮ ಶತಮಾನಗಳ ಹಿಂದೆಯೆ ಅವಸನಹೊಂದಿ, ಪ್ರಭುತ್ವದಿಂದ ದೂರ ಉಳಿಯಿತು. ಹೊರಗಿನಿಂದ ಬಂದ ಬಹಳ ಭಿನ್ನವಾದ ಆಚರಣೆ, ಧಾರ್ಮಿಕ ವಿಧಿ ವಿಧಾನ ಇರುವ ಇಸ್ಲಾಂ ಧರ್ಮ ಇಲ್ಲಿಯ ಬದುಕುಗಳ ಮೇಲೆ ಅನೇಕ ಪರಿಣಾಮಕಾರಿ ಪ್ರಭಾವ ಬೀರಿದರು, ಇಸ್ಲಾಂ ಬಗ್ಗೆ ಪರಕೀಯ ಎಂಬ ವಾದದ ದೃಷ್ಟಿ ಇರುವುದರಿಂದಲ್ಲೇ ಅದನ್ನು ಒಳಗೊಳ್ಳಲು ಇರುವ ಬಹು ದೊಡ್ಡ ತೊಡಕಾಗಿದೆ. ಇದರ ಜೊತೆ ವಸಾಹತುಶಾಹಿ ಕಾಲಘಟ್ಟದ ಹೊಸ ಪ್ರಜ್ಞೆ ಮತ್ತು ಅಂದಿನ ಚರಿತ್ರೆಗಳನ್ನು ನಾವು ಗ್ರಹಿಸುವಾಗ ತಾಳುವ ನಿಲುವುಗಳು ಕೂಡ ಅಷ್ಟೇ ಬಹಳ ಭಿನ್ನವಾದ್ದು, ಹಾಗೂ ಆ ಪರ್ವ ಕಾಲವನ್ನು ಸರಿಯಾಗಿ ಅರ್ಥೈಸುವಲ್ಲಿ ಇಂದಿನ ಎಲ್ಲಾ ಓದುಗಳು ಕೂಡ ಸೋತಿದೆ. ಅದಕ್ಕೆ ಕಾರಣ ಸರಿಯಾದ ಚರಿತ್ರೆ ಬರಹಗಳು ಸರಿಯಾದ ಕ್ರಮದಲ್ಲಿ ರಚನೆಯಾಗದೇ ಇರುವುದು. ಈ ಸಮಸ್ಯೆ ಮುಸ್ಲಿಂ ದೊರೆಗಳನ್ನು ಹೊರತು ಪಡಿಸಿ ಬೇರೆ ರಾಜರುಗಳಿಗೆ ಅಷ್ಟಾಗಿ ಭಾದಿಸಿಲ್ಲ.

“ವಸಾಹತುಶಾಹಿ ಕಾಲಘಟ್ಟದಲ್ಲಿ ಆಳಿದ ಹೈದರ್–ಟಿಪ್ಪು, ಮೈಸೂರು ಅರಸರು, ಮರಾಠರು, ಹೈದರಬಾದಿನ ನಿಜಾಮಾ, ಬ್ರಿಟೀಷರು ಹಾಗೂ ಫ್ರೆಂಚರು” ಇವರ ಬಗೆಗೆ ನಾವು ತಾಳುವ ನಿಲುವಿನಲ್ಲಿ ಇರಬೇಕಾದ ಚಾರಿತ್ರಿಕ ಪ್ರಜ್ಞೆಯನ್ನು ನಾನು ಪ್ರಶ್ನಿಸುವ ಪ್ರಯತ್ನ ಮಾಡುವೆ. ಈ ಮೇಲಿನ ಸಾಲನ್ನು ಮತ್ತೊಮ್ಮೆ ಗಮನಿಸಿ. ಇದು ನನ್ನ ಲೇಖನದ ಪದಗಳು ಆದರೆ ನನ್ನ ಮಾತುಗಳು ಅಲ್ಲ. ಅರಸ(ರು), ಮರಾಠ(ರು), ಬ್ರೀಟೀಷ್(ರು), ಫ್ರೆಂಚ(ರು) ಇಲ್ಲಿ ಆವರಣವನ್ನು ಗಮನಿಸಿ. ಅದೇ ರೀತಿ ಭಾರತದ ಇತಿಹಾಸ ಪುರುಷರ ಹೆಸರಗಳನ್ನು ಹೆಸರಿಸಿರುವ ಪಠ್ಯೇಗಳನ್ನು ಗಮನಿಸಿ ಅವರನ್ನು ಸಂಭೋಧಿಸುವ ಬಹುವಚನವನ್ನು ಗಮನಿಸಿ. ಅದೇ ರೀತಿ ತಳ /ಅನ್ಯ ಸಮುದಾಯದ ಚಾರಿತ್ರಿಕ ವ್ಯಕ್ತಿಗಳ ಹೆಸರನ್ನು ಗಮನಿಸಿ. ಇಂತಹ ಬರಹಗಳ ಹಿಂದಿನ ದೋಷ ಅರ್ಥವಾಗುತ್ತದೆ. ಇದು ಬರಹಗಳ ದೋಷವಲ್ಲ ಇದು ಪ್ರಜ್ಞೆಯ ದೋಷ . ಈ ಮನಸ್ಥಿತಿ ಮುಸ್ಲಿಂ ದೊರೆಗಳ ವಿಚಾರದಲ್ಲೂ ಹೀಗೆ ಕೆಲಸ ಮಾಡುತ್ತಿವೆ. ಅದೇ ರೀತಿಯಾಗಿ ಇಸ್ಲಾಂ ಧರ್ಮದ ಕೆಲ ಬದಲಾಗದ, ಜಡ್ಡುಗಟ್ಟಿದ

ಕಠಿಣ ಮೂಲಭೂತ ನಿಲುವುಗಳು ಕೂಡ ಚರಿತ್ರೆ ನಿರ್ಮಾಣಕ್ಕೆ ತೊಡಕಾಗಿದೆ. ಇಂತಹ ಸಮಸ್ಯೆ ಬ್ರಿಟೀಷರ ಕುರಿತಾದ ಇತಿಹಾಸದಲ್ಲಿ ಬರುವುದಿಲ್ಲ. ಬಂದರು ಅದು ಸಾತ್ವಿಕ ಸಿಟ್ಟಾಗಿ ಬಂದು ಹೋಗುತ್ತದೆ. ಬಹುಶಃ ಪ್ರಭುತ್ವ ಮತ್ತು ಚರಿತ್ರೆಕಾರರ ನಡುವೆ ಇರುವ ಅಂತರ್‌ಸಂಬಂಧದ ಬಗ್ಗೆ ನಾವು ಎಚ್ಚರ ವಹಸಿಬೇಕಾಗಿದೆ. ತಪ್ಪು ಬರಹಗಳ ಪಾಠದಿಂದ ತಪ್ಪಾದ ಇತಿಹಾಸಗಳು ನಿರ್ಮಾಣವಾಗಿ ಹೋಗಿದೆ. ನಾಗ ರಿಕತೆ ಕಾಲದ ಇತಿಹಾಸದಲ್ಲಿ ಕಾಣದ ಸಮಸ್ಯೆ, ಸುವರ್ಣ ಯುಗಗಳಲ್ಲಿ ಕಾಣದ ಸಮಸ್ಯೆ, ಸಾಮ್ರಾಟರು, ಚಕ್ರವರ್ತಿಗಳು, ರಾಜಮಹಾರಾಜರುಗಳ ಕಾಲದಲ್ಲಿ ಕಾಣದ ಗೊಂದಲಗಳು, ಸಮಸ್ಯೆಗಳು ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿನ ಚರಿತ್ರೆಯಲ್ಲಿ ಎದರುರಾಗಲು ಕಾರಣವೇನು? ಅದು ಆ ದಿನಗಳ ಗೊಂದಲವೇ? ಅಥವಾ ಬಹು ಹಿಂದಿನ ಗೊಂದಲವೇ? ಅಥವಾ ಈ ದಿನದ ಗೊಂದಲವೇ?

ಕೇವಲ 240 ವರ್ಷಗಳ ಹಿಂದಿನ ಇಬ್ಬರೂ ರಾಜರುಗಳ ಚರಿತ್ರೆಯನ್ನು ಗ್ರಹಿಸಲು ಇಷ್ಟು ಸಮಸ್ಯೆಗಳು ಇದ್ದರೇ ಅದು ಆ ರಾಜುರುಗಳ ಸಮಸ್ಯೆಯಲ್ಲ. ಅದು ನಮ್ಮೊಳಗಿನ ಸಮಸ್ಯೆ ಎಂಬ ಸಾಮಾನ್ಯ ಪ್ರಜ್ಞೆ ಇಲ್ಲದೇ ಇರುವುದು ವರ್ತಮಾನದ ದುರಂತವಾಗಿದೆ. ಇಂದಿನ ವರ್ತಮಾನ ಕುರಿತು ನಾನು ಟೀಕೆ ಮಾಡುತ್ತಿಲ್ಲ ಆದರೆ ಅದರ ಗ್ರಹಿಕೆಯ ಮಿತಿ ಮತ್ತು ವಸ್ತು ಸ್ಥಿತಿಯನ್ನು ಮಿತಿಯನ್ನು ದಾಖಲಿಸುವ ಪ್ರಯತ್ನವಿದು.

ಈ ನೆಲೆಯ ಮನಸ್ಥಿತಿ ಇಂದಿನ ವರ್ತಮಾನದ ಬಹು ದೊಡ್ಡ ಬಿಕ್ಕಟಿನಲ್ಲೊಂದು. ಇತಿಹಾಸ ಒಂದು ಕಾಲದ ರಾಜಕೀಯ ಮತ್ತು ಮತೀಯ ಐಡೆಂಟಿಟಿಗೆ ಪ್ರೇರಕವಾಗುವ ಅಂಶವಾಗಿರಬಹುದು. ಆದರೆ ಇದರಿಂದ ಇತಿಹಾಸಕ್ಕೆ ಏನಾದರೂ ಪ್ರಯೋಜನವೇ? ಇದರಿಂದ ಇತಿಹಾಸದ ಬದಲಾವಣೆ ಆಗಲು ಸಾಧ್ಯವೇ. ಟಿಪ್ಪು ತನ್ನ ರಾಜ್ಯಕ್ಕಾಗಿ ಯುದ್ಧ ಮಾಡಿದ್ದು ನಿಜ, ಬ್ರಿಟೀಷರನ್ನು ಸೋಲಿಸಿ ಭಾರತದಿಂದ ಓಡಿಸಲು ಇನ್ನಿಲ್ಲದಂತೆ ನೆರೆಯ ಹಾಗೂ ಹೋರ ದೇಶಗಳ ನೆರವು ಕೋರಿದ. ಫ್ರೆಂಚ್, ಅರಬ್, ಆಫ್ಘನ್, ಮುಸ್ಲಿಂ ರಾಷ್ಟ್ರಗಳ ಸಹಾಯ ಕೋರಿದ್ದು ನಿಜ. ಆದರೆ ಆತನ ಯೋಜನೆ ಹೋರಾಟ ಎಲ್ಲವೂ ತನ್ನ ಮೈಸೂರು ಸಂಸ್ಥಾನ ಉಳಿವಿಗೆ ಮಾಡಿದ ರಾಜತಾಂತ್ರಿಕ ವಿಚಾರವದು. ಭಾರತೀಯರಿಗೆ ಇನ್ನೂ ರಾಷ್ಟ್ರ ಪ್ರಜ್ಞೆಯೇ ಇರದಿದ್ದ ದಿನಗಳದು. ಅದರ ಅರಿವು ಕೂಡ ಇರಲಿಲ್ಲ . ತನ್ನ ಆಳ್ವಿಕೆಯ ರಾಜ್ಯವೇ ರಾಷ್ಟ್ರವಾಗಿತ್ತು ಆ ಕಾಲದ ರಾಜನಿಗೆ. ನೇಷನ್, ರಾಷ್ಟ್ರ, ದೇಶ ಪ್ರಜ್ಞೆ ಇಂಗ್ಲೀಷ್‌ಶಿಕ್ಷಣದ ಕೊಡುಗೆ. ಅದು ದಾಸ್ಯದ ಕೊಡುಗೆ ಎಂದು ಹೇಳಿಕೊಳ್ಳುವುದರಲ್ಲಿ ಇರುವ ಹೆಮ್ಮೆ. ಟಿಪ್ಪು ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟದಲ್ಲಿ ಬಲಿಯಾದನು ಎಂದು ಹೇಳುವಾಗ ಆ ಪ್ರಜ್ಞೆ ಗೈರಾಗಿರುವುದು ಯಾರ ದೋಷ?

1857 ದಂಗೆ ಸ್ವಾತಂತ್ರ್ಯ ಹೋರಾಟದ ಪ್ರಾರಂಭ ಎಂದು ಹೇಳುವ ಆಧುನಿಕ ಚರಿತ್ರೆಕಾರ ಪ್ರಜ್ಞೆಯಲ್ಲಿ ಪ್ರಜಾ ಜಾಗೃತಿಯ ಹಿನ್ನೆಲೆಯ ಹೋರಾಟದ ಮನೋಭಾವ ಮುಖ್ಯವಾಗಿ ಕಾಣುತ್ತದೆ. ಆದರೆ 1799ರ ಟಿಪ್ಪು ಹೋರಾಟ ಮತ್ತು ನಂತರದ ಪ್ರಾದೇಶಿಕ ರಾಜಗಳು ತಮ್ಮ ರಾಜ್ಯ ವಿಸ್ತಾರಣೆಯ ಆಸೆಯನ್ನು ಬದಿಗಿಟ್ಟು ಸಂಧಾನಗಳ ಹಾದಿಯಲ್ಲಿ ಬ್ರಿಟೀಷ್ ದಾಸ್ಯ ಒಪ್ಪಿಕೊಂಡಿರುವುದರ ಇತಿಹಾಸದಷ್ಟು ಸ್ಪಷ್ಟವಾದ ಮಾಹಿತಿ ಟಿಪ್ಪುವಿನ ಚರಿತ್ರೆಯಲ್ಲಿ ಏಕಿಲ್ಲ?

ಇಸ್ಟ್‌ಇಂಡಿಯ ಕಂಪನಿಯಿಂದ ಬ್ರಿಟೀಷ್ ಸರ್ಕಾರದ ಅಧಿನಕ್ಕೆ ಸರಿಯುವ ಬದಲಾವಣೆ ಬಿಟ್ಟರೆ ಬ್ರಿಟೀಷರು ಭಾರತವನ್ನು ನೋಡುವ ನಿಲುವಿನಲ್ಲಿ ಭಾರತ ಬದಲಾಗಲೇ ಇಲ್ಲ. ಟಿಪ್ಪುವನ್ನು ಗಾಂಧಿ, ಸುಭಾಷ್, ಭಗತ್‌ಸಿಂಗ್ ಇವರ ಜೊತೆ ಸಮೀಕರಸಿ ನೋಡುವ ಅಗತ್ಯವಿಲ್ಲ. ದಾಸ್ಯದ ಶೋಷಣೆಯನ್ನು ಅನುಭವಿಸಿ ಅದ ರಿಂದ ಬಿಡುಗಡೆಯ ಮುಕ್ತಿಗಾಗಿ ಪರಿತಪಿಸಿ, ಹೋರಾಟ ನಡೆಸಿದ ಮಹನೀಯರು ಅವರು. ಆದರೆ ಟಿಪ್ಪು ಕೂಡ ತನ್ನ ಮಕ್ಕಳನ್ನು ಒತ್ತೆ ಇಟ್ಟು ಬ್ರಿಟೀಷರ ದಾಸ್ಯದಿಂದ ತನ್ನ ಸಂಸ್ಥಾನವನ್ನು ಬಂಧ ಮುಕ್ತಗೊಳಿಸಿ, ಸ್ವತಂತ್ರ ರಾಜನಾಗಿ ಉಳಿಯುವ ಕನಸು ಕಂಡವನ್ನು. ಟಿಪ್ಪುವಿನದು ಬ್ರಿಟೀಷರ ಪ್ರಭುತ್ವವನ್ನು ವಿರೋಧಿಸುವ ಪ್ರಜ್ಞೆ, ಮತ್ತು ನಿರಂತರವಾದ ಕದನಗಳ ಉದ್ದೇಶ, ಅದರ ನಷ್ಟ, ಸಾವು ನೋವುಗಳ ಬಗ್ಗೆ ಚಾರಿತ್ರಕವಾದ ಮೌಲಿಕ ಅಧ್ಯಯನವನ್ನು ಬಯಸುತ್ತದೆ. ಟಿಪ್ಪುವನ್ನು ನಾವು ರಾಜಪ್ರಭುತ್ವದ ಯೋಧನಾಗಿ ನೋಡಬಹುದು. ಭಾರತದಲ್ಲಿ ಬ್ರಿಟೀಷ್ ಪ್ರಭುತ್ವವನ್ನು ವಿರೋಧಿಸಿ ನಡೆದ ಮೊದಲ ಸಂಗ್ರಾಮ ಎಂದು ನೋಡುವುದರಲ್ಲಿ ಯಾವ ದೋಷವು ಇಲ್ಲ.

ಸ್ವಾತಂತ್ರ್ಯ ಚಳವಳಿಗಳ ಹೋರಾಟದ ದಿನಗಳು ಬ್ರಿಟೀಷ್ ಪ್ರಭುತ್ವದ ಕಡೆಯದಿನಗಳು ಎಂದು ಕರೆಯಬಹುದು. (ಚಿತ್ರ–1) ಕೆಳಗಿನ ಪದಕವನ್ನು ಗಮನಿಸಿದರೆ ಬ್ರಿಟೀಷರ ಇತಿಹಾಸ ಪ್ರಜ್ಞೆಗೂ, ಭಾರತೀಯರ ಇತಿಹಾಸ ಪ್ರಜ್ಞೆಗೂ ಇರುವ ವ್ಯತ್ಯಾಸವನ್ನು ಗಮನಿಸಬಹುದು. ರಾಜನ ಮಕ್ಕಳನ್ನು ಒತ್ತೆಯಾಗಿಸಿಕೊಂಡ ಸೈನ್ಯಾಧಿಪತಿ ಲಾರ್ಡ್ ಕಾರ್ನ್ವಾಲಿಸ್‌ನ ಈ ಸಾಧನೆಯನ್ನು ಸ್ಮರಣ ಪದಕವಾಗಿ ಟಂಕಿಸಿ ಪ್ರಚಾರ ಮಾಡುವರು ಅದೇ ರೀತಿಯಾಗಿ ಮಹತ್ವವಾದ ಇದನ್ನು ಐತಿಹಾಸಿಕ ಮಹತ್ವದ ಸಂದರ್ಭವೆಂದು ಅವರು ದಾಖಲಿಸಿಕೊಳ್ಳುವರು. ಇಂತಹ ಬಿಕ್ಕಟ್ಟು ಭಾರತದ ಬೇರೆ ಯಾವ ರಾಜ ಮಹಾರಾಜರುಗಳು ಇಷ್ಟುರ ಮಟ್ಟಕ್ಕೆ ಬ್ರಿಟೀಷರಿಗೆ ತಲೆನೋವು ಆಗಿರಲಿಲ್ಲ, ಬ್ರಿಟೀಷರ ಸಹಾಯಕ ಸೈನ್ಯ ಪದ್ಧತಿಗೆ ದೇಶದ ಎಲ್ಲ ರಾಜರ ಒಪ್ಪಿಕೊಳ್ಳುವರು. ಆದರೆ ಅದನ್ನು ಟಿಪ್ಪು ಏಕೆ ವಿರೋಧಿಸಿದ? ಎಂಬ ವಿಚಾರವನ್ನು ನಾವು ಜಾಗತಿಕವಾದ ಇಸ್ಟ್‌ಇಂಡಿಯ ಕಂಪನಿಯ ಆರ್ಥಿಕ

ಮನೋವೃತ್ತಿಯ ಹಿನ್ನೆಲೆಯಿಂದ ಗಮನಿಸಿದರೆ ಅಂದಿನ ಲಭಾ ನಷ್ಟದ ವ್ಯವಹಾರ ಅರ್ಥವಾಗುತ್ತದೆ. ಭಾರತದ ದೇಶಿಯ ರಾಜರಂತೆ ಟಿಪ್ಪು ಕೇವಲ ರಾಜನಾಗಿದ್ದರೆ ಬ್ರಿಟೀಷರಿಗೆ ಸಮಸ್ಯೆ ಆಗಿರುತ್ತಿರಲಿಲ್ಲ. ಆ ಕಾಲಕ್ಕೆ ಟಿಪ್ಪು ಅಂತರ ರಾಷ್ಟ್ರೀಯ ಮಟ್ಟದ ವ್ಯಾಪಾರ ವ್ಯವಹಾರಕ್ಕೆ ಪ್ರತಿಸ್ಪರ್ಧಿಯಾಗಿದ್ದ. ನೇರವಾಗಿ ಯೂರೋಪ್ ರಾಷ್ಟ್ರಗಳ ಜೊತೆಗೆ ನೇರ ಮತ್ತು ಮುಕ್ತವಾದ ವ್ಯಾಪರ ವ್ಯವಹಾರಗಳ ನಡೆಸಲು ಮುಂದಾಗಿದ್ದರು. ಈ ಸಂಬಂಧವಾಗಿ 1788 ರಲ್ಲಿ ಫ್ರಾನ್ಸ್‌ದೊರೆ 16 ನೇ ಲೂಯಿಯ ಆಸ್ಥಾನಕ್ಕೆ ಟಿಪ್ಪು ರಾಯಬಾರಿ ಮೊಹಮ್ಮದ್ ದರ್ವಿಶ್ ಖಾನ್ ಹೋಗಿದ್ದ ದಾಖಲೆ ಇದಕ್ಕೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ ಅಮೇರಿಕ ರಾಷ್ಟ್ರ ಸ್ವಾತಂತ್ರ್ಯವನ್ನು ಪಡೆದಾಗ ಅವರ ಸಂಭ್ರಮಕ್ಕೆ ತನ್ನ ಕಾಣಿಕೆನ್ನು ಸಮರ್ಪಿಸಿ ಆ ರಾಷ್ಟ್ರದ ಸ್ವಾತಂತ್ರ್ಯ ಪ್ರಜ್ಞೆಯನ್ನು ಗೌರವಿಸದ ಭಾರತೀಯ ರಾಜ. ಬ್ರಿಟೀಷರಿಂದ ಬಿಡುಗಡೆ ಬಯಸುವ, ಅವರ ದಾಸ್ಯವನ್ನು ನಿರಾಕರಿಸುವ ಪ್ರಜ್ಞೆಯನ್ನು ಏನೆಂದು ಹೇಳಬಹುದು? ಬ್ರಿಟೀಷರು ವಿರುದ್ಧ ತನ್ನ ರಾಜ್ಯದ ಸ್ವಾಯತ್ತ ಸ್ವಾತಂತ್ರ್ಯಕ್ಕೆ ಟಿಪ್ಪು ಹೋರಾಟ ಮಾಡಿದ್ದು ನಿಜ. ಏಕೆಂದರೆ ಅವನ ಸಂಸ್ಥಾನವೇ ಅವನಿಗೆ ರಾಷ್ಟ್ರವಾಗಿತ್ತು. ನೆರೆಯ ಕೊಡಗು, ಹೈದರಬಾದ್, ಮರಾಠ ಆಳ್ವಿಕೆ ಪ್ರದೇಶಗಳು ಅವನಿಗೆ ಅನ್ಯ ರಾಷ್ಟ್ರಗಳಾಗಿದ್ದವು. ಇಂದಿನ ರಾಷ್ಟ್ರ ಕಲ್ಪನೆ, ದೇಶದ ಐಕ್ಯತೆ, ಮಾರ್ಕ್ಸ ಸಿದ್ಧಾಂತ, ಜಾತ್ಯಾತೀತ ಸಿದ್ಧಾಂತ ಇಂತಹ ಪ್ರಜ್ಞೆ ಟಿಪ್ಪುವಿಗೆ ಬರಲು ಹೇಗೆ ಸಾಧ್ಯ. ಇವೆಲ್ಲ ಇಂದಿನ ಕಾಲದ ಪ್ರಜ್ಞೆ, ನಮ್ಮ ಓದಿನ ಕ್ರಮದಲ್ಲಿ ಇವೆಲ್ಲ ಹಿನ್ನೆಲೆಯ ದೃಷ್ಟಿಯಾಗಿ ನಿಂತು ಇತಿಹಾಸವನ್ನು ನೋಡುತ್ತಿರುತ್ತದೆ. ಇವುಗಳಿಂದ ಬಿಡುಗಡೆ ಪಡೆದರೆ ಮಾತ್ರ ಆ ಕಾಲದ ಪ್ರಜ್ಞೆ ನಮಗೆ ಮೂಡಲು ಸಾಧ್ಯ. ಇಲ್ಲವಾದರೆ ಟಿಪ್ಪು ಜಯಂತಿಯಿಂದ ಚರಿತ್ರೆಗೆ ಬಂದ ಲಾಭವೇನು. ಚರಿತ್ರೆಯ ಶಿಸ್ತು, ಚಾರಿತ್ರಿಕ ಪ್ರಜ್ಞೆಯೇ ಇರದ ಬರಹಗಾರರ ಮೂಲಭೂತವಾದಿಗಳ ಮತೀಯ ಸೃಷ್ಟಿ ಪ್ರಜ್ಞೆಯ ಆವಂತರದಿಂದಾಗಿ ಟಿಪ್ಪುವಿನಂತಹ ಇತಿಹಾಸ ಪುರುಷರ ಅಧ್ಯಯನಕ್ಕೆ ಬಲುದೊಡ್ಡ ತೊಡಕಾಗಿದೆ.

**ಮೈಸೂರುನ ನಕ್ಷೆ (ಚಿತ್ರ–2):** "1760ರ ಹೈದರ್‌ಮತ್ತು ಟಿಪ್ಪುವಿನ ಕಾಲದ" ಭೂಪಟ ಇದು ಶ್ರೀರಂಗ ಪಟ್ಟಣ ರಾಜಧಾನಿಯಾಗಿದ್ದು ಕೊಂಡು ದಕ್ಷಿಣ ಭಾರತದ ಪ್ರಭಲ ರಾಜ ಪ್ರಭುತ್ವ ಹೊಂದಿದ್ದ. ಮೈಸೂರು ರಾಜ್ಯವದು. ಉತ್ತರದ ಗುತ್ತಿ ಬಳ್ಳಾರಿ ಧಾರವಾಡ, ಭಟ್ಕಳ, ಮಂಗಳೂರು, ಕಲ್ಲಿಕೋಟೆ, ದಿಂಡಿಗಲ್, ತಿರುಚನಾಪಲ್ಲಿ ಒಳಗೊಂಡಂತೆ ವಿಶಾಲ ಭಾಗವನ್ನು ಮೈಸೂರು ರಾಜ್ಯ ಆವರಿಸಿತ್ತು. ಇವರು ಚಿತ್ರದುರ್ಗ ಕೆಳದಿ ಬೀಳಗಿ ಪಾಳೆಪಟ್ಟುಗಳನ್ನು ಸೋಲಿಸಿ ಕೇಂದ್ರೀಕೃತ ಆಡಳಿತ ರಾಜ್ಯವನ್ನು ಕಟ್ಟಿದರು. ಇಷ್ಟು ವಿಸ್ತಾರ ಭೂ ಭಾಗ ಗೆದ್ದ ಮೇಲೆ ಆತ ತನ್ನ

ಪ್ರಭುತ್ವನ್ನು ಸ್ಥಾಪಿಸಿದ್ದು ತಪ್ಪೇ? ಟಿಪ್ಪು ಮರಣ ನಂತರ ಇದೇ ಮೈಸೂರು ರಾಜ್ಯವು ಮರಾಠ ಪೇಶ್ವೆ, ಬ್ರಿಟಿಶ್ಹಾಗೂ ನಿಜಾಮರು ಹಂಚಿಕೊಂಡರು. ಇವರ ಹಂಚಿಕೆ ಮಾಡಿಕೊಂಡು ಉಳಿದ ಪಾಲಿನ ಒಡೆತನದ ತುಂಡು ಪ್ರಾಂತ್ಯದ ಪ್ರಭುತ್ವವನ್ನು ಅನುಭವಿಸಲು ಮೈಸೂರು ಒಡೆಯರು ಮದ್ರಾಸ್‌ನ ಬ್ರಿಟಿಷ್‌ಕಂಪನಿ ಮುಂದೆ ಮೊರೆಯಿಟ್ಟು ಪ್ರಾರ್ಥಿಸಿದ್ದನ್ನು ಇಲ್ಲಿ ಗಮನಿಸಬೇಕು. ಆದರೆ ಯುದ್ಧವಿಲ್ಲದೆ, ತಮ್ಮ ದೌರ್ಬಲ್ಯಗಳಿಂದ ಆಳ್ವಿಕೆ ಮಾಡಲು ಸಾಧ್ಯವಾಗದೆ ಇದ್ದ ಪ್ರಾಂತ್ಯವನ್ನು ನಿರ್ವಹಣೆ ಮಾಡಲು ವಿಫಲವಾಗಿ 1831ರಲ್ಲಿ ಸಂಸ್ಥಾನವನ್ನು ಬ್ರಿಟೀಷರು ಕಬ್ಜಾಕ್ಕೆ ತೆಗೆದುಕೊಂಡರು. ಟಿಪ್ಪುವಿಗೆ ದ್ರೋಹ ಮಾಡಿದ ಯಾವ ರಾಜರು ಕೂಡ ಮುಂದೆ ಎಲ್ಲೂ ಸ್ವತಂತ್ರ ರಾಜ ಪ್ರಭುತ್ವನ್ನು ಅನುಭವಿಸಲಿಲ್ಲ. ಕೊಡಗಿನ ರಾಜ, ನಿಜಾಮ, ಪೇಶ್ವೆ ಇವರುಗಳು ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟು ತಮ್ಮ ರಾಜ ಪ್ರಭುತ್ವನ್ನು ಕಳೆದುಕೊಂಡು ಬ್ರಿಟೀಷರ ಹುಕುಂನಂತೆ ನಡೆಯುವ ದಾಸರಾಗಿ ಉಳಿದರು.

ಮೆಕಾಲೆ ಶಿಕ್ಷಣ ಪದ್ಧತಿಯ ಫಲವಾಗಿ ಇಂಗ್ಲೀಷ್ ಶಿಕ್ಷಣದ ಹೊಸ ಜ್ಞಾನ ಶಾಖೆಗಳು ನಮಗೆ ಪರಿಚಯವಾದ್ದು. ಅದರ ಒಂದು ಫಲವಾಗಿ ಚರಿತ್ರೆ ಕೂಡ. ನಮ್ಮಲ್ಲಿ ಇದ್ದ ಚರಿತ್ರೆ ಕತೆ ಕಾವ್ಯ, ರೂಪಕ, ಉಪಮೆಗಳ ಲೌಕಿಕ ಶಕ್ತಿಗಳ ಭ್ರಮಾಲೋಕವನ್ನೆ ಸೃಷ್ಟಿಸಿದ್ದವು. ಉದಾಹರಣೆಗೆ ದೇವಚಂದ್ರನ 'ರಾಜಾವಳಿ' ಇಂತಹ ಕತೆಗಳಿಂದ ಚರಿತ್ರೆ ಕಟ್ಟಲು ಸಾಧ್ಯವೇ? ಹೊಸ ಯುಗದ, ಹೊಸ ಕಾಲ ಪ್ರಜ್ಞೆಯಲ್ಲಿ ಚರಿತ್ರೆ ನೋಡಿದರೆ ನೈಜ್ಯತೆಗಿಂತ ಭಿನ್ನವಾದ ಇತಿಹಾಸದ ಪಾಠ ಲಭ್ಯವಾಗುತ್ತದೆ. ಇತಿಹಾಸ ಸಂಶೋಧನೆಗೆ ಮೂಲ ಭೂತಾಗಿ ಬೇಕಾಗಿರುವುದು ಕಾಲ ಪ್ರಜ್ಞೆ, ವಿಜ್ಞಾನದ ನೆರವು, ಐತಿಹ್ಯಗಳ ದಾಖಲೆಗಳು, ದೇಶಿಯ ವಿದೇಶಿಯ ದಾಖಲೆಗಳು. ಉದಾಹರಣೆಗೆ: ಫ್ರೆಂಚರ ದೃಷ್ಟಿಯಲ್ಲಿ ಟಿಪ್ಪು ಒಳ್ಳೆಯ ಸಂಘಟಕ, ರಾಜನೀತಿ ಉಳ್ಳ ಸೂಕ್ಷ್ಮ ಮತಿ, ಚತುರ, ಅಂತರ ರಾಷ್ಟ್ರೀಯ ಮಟ್ಟದ ನೇರ ವ್ಯಾಪಾರದಲ್ಲಿ ಬದ್ಧತೆ ತೋರಿದ ಚತುರ ಎಂದೆಲ್ಲ ದಾಖಲೆಗಳಿವೆ. ನೆಪೋಲಿಯನ್ನ ಬರೆದ ಪತ್ರ ಅದಕ್ಕೆ ಸಾಕ್ಷಿಯಾಗಿದೆ. ಆದರೆ ಬ್ರಿಟೀಷರ ದೃಷ್ಟಿಯಲ್ಲಿ ಏನು ಎಂಬುದು ಇಂದಿನ ದಾಖಲೆ ಹೇಳುತ್ತವೆ. ಬ್ರಿಟೀಷರೇ ಕಲಿಸಿದ ಇತಿಹಾಸದಲ್ಲಿ ಶತ್ರುವನ್ನು ನೈಜ್ಯವಾಗಿ ದಾಖಲಿಸಲು ಹೇಗೆ ಸಾಧ್ಯ? ಕಲಿಕೆಯ ವಸಾಹತು ಶಿಕ್ಷಣದ ಪಾಠದಲ್ಲೂ ದೋಷವಿದೆ. "ಹೈದರ್, ಟಿಪ್ಪು, ಧೋಂಡಿಯಾ, ಸರ್ಜಾ ರಂಗಪ್ಪ ನಾಯಕ–ಹನುಮಪ್ಪನಾಯಕ, ಸ್ವಾಮಿ ಅಪರಂಪಾರ, ಬೂದಿ ಬಸವಪ್ಪ ಮುಂತಾದ ವಸಾಹತುಶಾಹಿ ವಿರೋಧಿ ವೀರರೆಲ್ಲ, ಇಲ್ಲಿ ಲೋಕಕಂಟಕರು." ರಹಮತ್ ತರೀಕೆರೆ, ರಾಜಧರ್ಮ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ರಹಮತ್‌ತರೀಕೆರೆಯವರ ಮಾತನ್ನು ಒಪ್ಪಿ ಮುಂದುವರಿಸುತ್ತ ವಸಾಹತುವನ್ನು ಸ್ವಿಕರಿಸುವ ಮನೋಧರ್ಮ ಇಂದಿಗೂ ಬದಲಾಗದೆ ಇರುವುದು

ನಮ್ಮ ಚಾರಿತ್ರಿಕ ಪ್ರಜ್ಞಾ ಶೂನ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಆಗದರೇ ನಾವು ಬ್ರಿಟೀಷರನ್ನು ಯಾವ ದೃಷ್ಟಿಯಲ್ಲಿ ನೋಡಬೇಕು. ಟಿಪ್ಪುವನ್ನು ಯಾವ ದೃಷ್ಟಿಯಲ್ಲಿ ಗ್ರಹಿಸಬೇಕು. 1914ರ ಗವರ್ನರ್ ಥಾಮಸ್ ಮನ್ರೋವನ್ನು ನಮ್ಮ ರಾಜರು ಗೌರವಿಸಿ ಸಂಭೋದಿಸಿದ ಮಾತುಗಳಿದು. 'ಮನ್ರೋರವರು ಬಹಳ ಉದಾರಹೃದಯದವರು, ದೂರದೃಷ್ಟಿಯುಳ್ಳವರು, ರಾಜನೀತಿಜ್ಞರು' ಎಂದೆಲ್ಲ ಬಣ್ಣಿಸುವ ದಾಸ್ಯದ ದೊರೆತನವನ್ನು ಮತ್ತು ಬ್ರಿಟೀಷ್ ಪ್ರಭುತ್ವನ್ನು ನೆಂದು ಒಪ್ಪಿಕೊಳ್ಳಬೇಕು? ಇಂತಹ ದಾಸ್ಯವನ್ನು ನಿರಾಕರಿಸುವ, ವಿರೋಧಿಸುವವರ ಜನರು ದೇಶದ್ರೋಹಿ, ದಂಗೆ ಕೋರರು, ಲೂಟಿ ಕೋರಾದರು. ವಸಾಹತು ಕಾಲದ ಚರಿತ್ರೆಯನ್ನು ನಾವು ಬ್ರಿಟೀಷರ ಬರಹವನ್ನು ಆಶ್ರಯಸಿ ನೋಡುವುದರ ಫಲವಾಗಿ ಇಲ್ಲಿಯ ರಾಜರುಗಳಲ್ಲಿ ಭಿನ್ನತೆಯನ್ನು ಕಾಣಿತ್ತೇವೆ. ಹೈದರ್, ಟಿಪ್ಪು, ಧೋಂಡಿಯಾ, ಸರ್ಜಾ ರಂಗಪ್ಪ ನಾಯಕ–ಹನುಮಪ್ಪನಾಯಕ, ಸ್ವಾಮಿ ಅಪರಂಪಾರ, ಬೂದಿ ಬಸವಪ್ಪ, ಸಂಗೊಳ್ಳಿ ರಾಯಣ್ಣ ಇವರುಗಳು ದೇಶ ದ್ರೋಹಿಗಳೆಂದು ಕಾಣುವುದಾದರೆ, ಇವರ ದಾಸ್ಯ ಒಪ್ಪುವವರನ್ನು ಏನೆಂದು ಕರೆಯಬಹುದು? ಇಂತಹ ಪರ ವಿರೋಧ ಮನಸ್ಥಿತಿಯ ಹುಟ್ಟಿಗೆ ಚಾರಿತ್ರಿಕ ದೃಷ್ಟಿ ವೈಫಲ್ಯವೇ ಪ್ರಧಾನವಾಗಿದೆ.

ಭಾರತವು ರಾಜ ಮಹಾ ರಾಜರಿಂದ ಅನುಭವಿಸಿದ ಪ್ರಭುತ್ವದ ಕಲ್ಪನೆ, ಬ್ರಿಟೀಷರಿಂದ ಕಲಿತ ಪ್ರಭುತ್ವದ ಪಾಠ, ಸ್ವಾತಂತ್ರ್ಯ ನಂತರ ನಾವು ಅನುಭವಿಸುತ್ತಿರುವ ಪ್ರಜಾಪ್ರಭುತ್ವದ ಕಲ್ಪನೆಗಳಲ್ಲಿ ಬಹಳ ವೈರುಧ್ಯ ಮತ್ತು ವ್ಯತ್ಯಾಸಗಳು ಇವೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಇತಿಹಾಸವನ್ನು ನೋಡಿದರೆ ಬ್ರಿಟೀಷರು, ಇಲ್ಲಿಯ ರಾಜ ಮಹಾರಾಜರುಗಳೆಲ್ಲರೂ ಪ್ರಜಾಪ್ರಭುತ್ವದ ವಿರೋಧಿಗಳೆಂದೇ ಬರೆಯಬೇಕಾಗುತ್ತದೆ. ಏಕೆಂದರೆ ಅವರುಗಳು ಯಾರು ಇಂದಿನ ಸಂವಿಧಾನ ದತ್ತವಾದ ಪ್ರಭುತ್ವನ್ನು ನಡೆಸಿಲ್ಲ. ಪ್ರಜಾಪ್ರಭುತ್ವ ಕಲ್ಪನೆಯಿಂದ ಇತಿಹಾಸ ನೋಡುವುದು ಕೂಡ ತಪ್ಪು. ಏಕೆಂದರೆ ಆ ಕಾಲದ ಚರಿತೆಯಲ್ಲಿ ಇಲ್ಲದನ್ನು ಕಾಣ ಬಯಸಿದರೆ ಅದು ಸಿಗುವುದಿಲ್ಲ. ಇದರಿಂದ ನಮ್ಮ ಪ್ರಭುತ್ವ ಒಪ್ಪುವ ಚರಿತ್ರೆ ನಮಗೆ ಲಬ್ಧವಾಗುವುದಿಲ್ಲ. ಕಾಲ ಪ್ರಜ್ಞೆ ಇರದೆ, ಚಾರಿತ್ರರಿಕ ದೃಷ್ಟಿ ಇರದೆ ಬರೆದ ಟಿಪ್ಪು ಕುರಿತಾದ ಅನೇಕ ಕೃತಿಗಳು ರೋಚಕತೆಯ ಧಾರ್ಮಿಕ ಒಡಕನ್ನು ಉಂಟುಮಾಡುವ ಪ್ರಚೋದನಾತ್ಮಕವಾದ ಕೃತಿಯಾಗಿದೆ. ಹಿಂದೂ ದೇವಾಲಯವನ್ನು ಲೂಟಿ ಮಾಡಿದ ಮರಾಠ ಬ್ರಾಹ್ಮಣ ಪೇಶ್ವೆಗಳ ಬಗ್ಗೆ ಮತೀಯ ಬರಹಗಾರರು ಜಾಣ ಮೌನವಹಿಸುವುದು ಏಕೆ? ಕಾನೂನಿನ ಅಥವಾ ವೈದ್ಯಶಾಸ್ತ್ರದ ಅರಿವೇ ಇರದ ನಾನು ಕಾನೂನಿಯ ಅಥವಾ ವೈದ್ಯಶಾಸ್ತ್ರ ಕುರಿತು ಬರೆದರೆ ಏನು ಅಪಾಯವಾಗುವುದು? ಅದೇ ಅಪಾಯ ಚರಿತ್ರೆಯಲ್ಲೂ ಆಗುವುದು. ಎಲ್ಲಾ ವಿಷಯದಲ್ಲೂ ಅಪಾಯವೇ. ಎಲ್ಲ ಧರ್ಮದ

ರಾಜರುಗಳಂತೆ ಟಿಪ್ಪು ಕೂಡ ಒಬ್ಬ ರಾಜ. ಟಿಪ್ಪು ಕುರಿತಾದ ಬರಹಗಳ ಓದಿಗಿಂತ ಭಿನ್ನವಾದ ನೈಜ್ಯ ಚರಿತ್ರೆಯ ಹೊಸ ಓದನ್ನು, ಸಂಶೋಧನೆಯನ್ನು ಬಯಸುವ ಆಕರ್ಷಕ ವಸ್ತು ವಿಷಯವಾಗಿದೆ.



**ಚಿತ್ರ–1**




**ಚಿತ್ರ–2**

**ಪರಾಮರ್ಶನ ಗ್ರಂಥಗಳು:**


1. ಮೊಹಿಬ್ಬುಲ್ ಹಸನ್. ಸಮೇತನಹಳ್ಳಿ ರಾಮರಾಯ (ಅನು). (1988). ಟಿಪೂ ಸುಲ್ತಾನನ ಇತಿಹಾಸ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
2. ಷೇಕ್‌ಆಲಿ ಬಿ. (1997). ಕರ್ನಾಟಕ ಚರಿತ್ರೆ (ಎ.ಡಿ 1760–1800). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
3. ರಹಮತ್ ತರೀಕೆರೆ. (2019). ರಾಜಧರ್ಮ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ಮಹೇಶ್ ಕುಮಾರ್ ಸಿ. ಎಸ್. (2016) ಟಿಪ್ಪು ಸುಲ್ತಾನ್‌ಹಕೀಕತ್. ಪರಸ್ಪರ ಪ್ರಕಾಶನ. ಬೆಂಗಳೂರು.
5. ಮಾಸ್ತಿ ವೆಂಕಟೇಶ ಅಯ್ಯಂಗಾರ್. (2011). ಜಂಗ್‌ನಾಮಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್‌ಜೀವನ ಕಾರ್ಯಾಲಯ ಟ್ರಸ್ಟ್. ಬೆಂಗಳೂರು.